# ಸೂರ್ಯನ ಪಾದ

ಅರೆ! ಏನೀ ಮೋಹ
ಮಟಮಟ ಮಧ್ಯಾಹ್ನ ಮರದ ಕೆಳಗೆ
ಹಾಸಿ ಮಲಗಿದೆ ರಾತ್ರಿ ಆಗಸ
ಎಲೆ ಎಲೆ ನಡುವಿನಿಂದ ತೂರಿಬಂದು
ತರಗೆಲೆಗಳ ಮೇಲೆ ಹೊಳೆವ ನಕ್ಷತ್ರ ರಾಶಿ.
ಅಲ್ಲೊಂದು ವಂಕಿಹುಳ ಮಿಡತೆ ಕಂಬಳಿ ಎರೆ
ಇರುವೆ ಗೆದ್ದಲು ಜೇಡ ಚಿಟ್ಟೆ
ನೆಲದ ನಕ್ಷತ್ರಗಳ ಮೋಹಕ್ಕೆ ಸಿಲುಕಿ
ಜಾರಿಬಿದ್ದವೋ ಎಂಬಂತ ಆಗಸದ ನಂಟು.

ಸುತ್ತಲೂ ಸುಟ್ಟು ಕರಕಲಾದ ಬಣಬಣ ಬಯಲು
ನಡುವೆ ನಿಂತ ಆ ಒಂಟಿ ಮರದ ಹೊಳಪು
ಸಾವಿರ ಕಂಗಳಲಿ ಅಖಂಡ ಪ್ರಖರತೆಯ ಹೀರಿ
ನಿಂತ ನೆಲಕ್ಕೆ ಜೀವ ತುಂಬುವ ಸಂತ!
ನೆರಳೆಂದರೆ ಎಂತಾ ನೆರಳು
ನಕ್ಷತ್ರಗಳ ತುಂಬಿಕೊಂಡ ಒಡಲು.

ಸೂರ್ಯನ ಪಾದದ ಕಚಗುಳಿಗೆ
ತರಗಿನೊಳಗೆ ತೂರಿದ ವಂಕಿಹುಳ ಮಿಡತೆ ಗೆದ್ದಲು
ಬೆಳಕಿನ ಸದ್ದಿಗೆ ಎಚ್ಚೆತ್ತು ಬೆರಗುಗೊಂಡ ಬೇರು
ನಗೆಮೊಗ್ಗು ಚಿಗುರಿಸುವ ಹಂಬಲದ ಮರ
ಅಫೀಮಿನ ಅಮಲಿನಲಿ ಮನುಷ್ಯನ ಪಾದಕ್ಕೆ
ಏನೇನು ರೂಪುಗಳು
ಕತ್ತಿ ಬಂದೂಕು ಬಾಂಬು... ಅಬ್ಬಬ್ಬಾ!
ರಕ್ತ ಮೆತ್ತಿದ ಪಾದಗಳ ಚಲನೆಗೆ
ಹೃದಯಬೇನೆ ಹಾಲೆದೆಯ ಭೂಮಿಗೆ

